ವಿಷಯ:- ಶಿಕಾರಿಪುರ ತಾಲ್ಲೂಕಿನಲ್ಲಿ ಹೊಸದಾಗಿ ಮಂಜೂರಾದ ಅಂಗನವಾಡಿ ಕೇಂದ್ರಗಳ ಸಂಖ್ಯೆ?

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 591 (1186)

ಶ್ರೀ ಬಿ.ಎಸ್.ಯಡಿಯೂರಪ್ಪ (ಶಿಕಾರಿಪುರ):- ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿಕಾರಿಪುರ ತಾಲ್ಲೂಕಿನಲ್ಲಿ ಒಟ್ಟು ಎಷ್ಟು ಅಂಗನವಾಡಿ ಕೇಂದ್ರಗಳು ಕೆಲಸ ನಿರ್ವಹಿಸುತ್ತಿವೆ, ಈ ಕೇಂದ್ರಗಳಲ್ಲಿ ಎಷ್ಟು ಹುದ್ದೆಗಳು ಖಾಲಿ ಇವೆ. ಶಿಕಾರಿಪುರ ತಾಲ್ಲೂಕಿನಲ್ಲಿ ಒಟ್ಟು ಎಷ್ಟು ಅಂಗನವಾಡಿ ಕೇಂದ್ರಗಳನ್ನು ಹೊಸದಾಗಿ ಮಂಜೂರು ಮಾಡಲು ಗುರ್ತಿಸಲಾಗಿದೆ.

ಆ) ಅಂಗನವಾಡಿ ಕಾರ್ಯಕರ್ತೆಯರಿಗೆ ಮತ್ತು ಸಹಾಯಕಿಯರಿಗೆ ಗೌರವಧನ ಹೆಚ್ಚಿಸುವ ಬಗ್ಗೆ ಆಯವ್ಯಯದಲ್ಲಿ ಅನುದಾನ ಅವಕಾಶ ಮಾಡಲಾಗಿದೆಯೆ.

ಇ) ಹಾಗಿದ್ದಲ್ಲಿ ಶಿವಮೊಗ್ಗ ಜಿಲ್ಲೆಗೆ ಎಷ್ಟು ಅನುದಾನವನ್ನು ಮಂಜೂರು ಮಾಡಲಾಗಿದೆ?

ಶ್ರೀಮತಿ ವಿಮಲಬಾಯಿ ದೇಶ್‌ಮುಖ್ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ರಾಜ್ಯ ಸಚಿವರು:-

ಅ) ಶಿಕಾರಿಪುರ ಸಮಗ್ರ ಬಾಲವಿಕಾಸ ಯೋಜನೆಯಲ್ಲಿ 200 ಅಂಗನವಾಡಿ ಕೇಂದ್ರಗಳು ಕಾರ್ಯನಿರತಗೊಂಡಿವೆ. ಅಂಗನವಾಡಿ ಕಾರ್ಯಕರ್ತೆಯರ 4 ಹುದ್ದೆಗಳು ಖಾಲಿ ಇದೆ.

8 ಅಂಗನವಾಡಿ ಕೇಂದ್ರಗಳನ್ನು ಹೊಸದಾಗಿ ಮಂಜೂರು ಮಾಡಲು ಉದ್ದೇಶಿಸಲಾಗಿದೆ.

ಆ) ಗೌರವಧನವನ್ನು ದಿನಾಂಕ 1-4-95ರಿಂದ ಹೆಚ್ಚಿಸಲಾಗಿದ್ದು, ಇದಕ್ಕಾಗಿ ಜಿಲ್ಲಾ ಪಂಚಾಯತ್ ಆಯವ್ಯಯದಲ್ಲಿ ಹಣ ಒದಗಿಸಲಾಗಿದೆ.

ಇ) ಜಿಲ್ಲಾ ಪಂಚಾಯ್ತಿ ವತಿಯಿಂದ ಬಾಲಾವಿಕಾಸ ಯೋಜನೆಗಾಗಿ ಒದಗಿಸಲಾದ ಆಯವ್ಯಯ ರೂ.220.00ರಲ್ಲಿ ಅದು ಸೇರಿರುತ್ತದೆ.

ವಿಷಯ:- ಹೆಗ್ಗೊಂಡನಹಳ್ಳಿಯಲ್ಲಿ ದೇವಾಲಯದ ಜಮೀನನ್ನು ಕಬಳಿಸಿರುವ ಬಗ್ಗೆ.

ಚುಕ್ಕೆ ರಹಿತ ಪ್ರಶ್ನೆಯ ಸಂಖ್ಯೆ : 592 (326)

ಶ್ರೀ ಬಿ.ಎಸ್.ಯಡಿಯೂರಪ್ಪ (ಶಿಕಾರಿಪುರ):- ಮಾನ್ಯ ಮುಜರಾಯಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಆನೇಕಲ್ ತಾಲ್ಲೂಕಿನ ಸರ್ಜಾಪುರ ಹೋಬಳಿಯ ಹೆಗ್ಗೊಂಡನಹಳ್ಳಿಯಲ್ಲಿರುವ ಶ್ರೀಬಸವೇಶ್ವರಸ್ವಾಮಿ ದೇವಾಲಯದ ಜಮೀನು ಒಟ್ಟು ಎಕರೆ ಎಷ್ಟು.

ಆ) ಸದರಿ ದೇವಾಲಯದ ಜಮೀನು 1971 ದಾಖಲೆಗಳಲ್ಲಿ ಎಷ್ಟು ವಿಸ್ತೀರ್ಣವಿತ್ತು ಈಗ ಎಷ್ಟು ವಿಸ್ತೀರ್ಣವಿದೆ.

ಇ) ಈ ದೇವಾಲಯದ ಜಮೀನು ಸ್ಥಳೀಯರು ಕಬಳಿಸಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ಹಾಗಿದ್ದಲ್ಲಿ ಸರ್ಕಾರದವರು ತೆಗೆದುಕೊಂಡಿರುವ ಕ್ರಮಗಳೇನು?

ಶ್ರೀ ಬಿ.ಮುನಿಯಪ್ಪ ಮುದ್ದಪ್ಪ (ಮುಜರಾಯಿ ಸಚಿವರು):-

ಅ) ಹೆಗ್ಗೊಂಡನಹಳ್ಳಿಯ ಸ.ನಂ 71ರಲ್ಲಿ 1-38 ಎಕರೆ ಖರಾಬು, ಸ.ನಂ.81ರಲ್ಲಿ 5-91 ಎಕರೆ ಖುಷ್ಕಿ (ಇದರಲ್ಲಿ 3 ಗುಂಟೆ ಖರಾಬು)

ಆ) 1971ರ ದಾಖಲೆಗಳ ಪ್ರಕಾರ ಸ.ನಂ.71ರಲ್ಲಿ 1-36 ಎಕರೆ ಸ,ನಂ.81ರಲ್ಲಿ 5-01 ಎಕರೆ ಇತ್ತು, ಇದರಲ್ಲಿ ಸ.ನಂ.71 ಈ ದೇವಾಲಯವಿದೆ ಈಗಲೂ 1-36 ಎಕರೆ ಜಮೀನು ದೇವಸ್ಥಾನದ ವಶದಲ್ಲಿರುತ್ತದೆ. ಸ.ನಂ.81ರಲ್ಲಿದ್ದ ಜಮೀನು ಮಾತ್ರ ನಾಲ್ಕು ಜನ ಗೇಣಿದಾರರಿಗೆ ಭೂನ್ಯಾಯ ಮಂಡಳಿಯು ಅಧಿಭೋಗದಾರಿಕೆಯನ್ನು ನೀಡಿರುವುದರಿಂದ ಅವರ ಅನುಭವದಲ್ಲಿದೆ.

ಇ) ಸ.ನಂ.81ರ ಜಮೀನು 4 ಜನ ಗೇಣಿದಾರರಿಗೆ ಭೂನ್ಯಾಯ ಮಂಡಲಿಯ ಪ್ರಕರಣ ಸಂಖ್ಯೆ: ಎಲ್ಆರ್ಎಫ್: ಐಎಸ್ಎಂ: 1007, 1008:81-82 ದಿನಾಂಕ : 3-6-82ರಲ್ಲಿ ಅಧಿಭೋಗದಾರಿಕೆ ಸ್ಥಿರೀಕರಿಸಿರುವುದರಿಂದ, ಕಬಳಿಕೆಯ ಪ್ರಶ್ನೆ ಉದ್ಭವಿಸುವುದಿಲ್ಲ.

ವಿಷಯ:- ಕೃಷಿ ಮಾರಾಟ ಮಂಡಳಿಯ ರಸಗೊಬ್ಬರದ ಬಗ್ಗೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 593 (1129)

ಶ್ರೀ ಬಿ.ಎಸ್.ಯಡಿಯೂರಪ್ಪ (ಶಿಕಾರಿಪುರ):- ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಕಳೆದ 5ವರ್ಷಗಳಲ್ಲಿ ವಿವಿಧ ಬಗೆಯ ಗೊಬ್ಬರವನ್ನು ಎಷ್ಟು ಪ್ರಮಾಣದಲ್ಲಿ ಉಪಯೋಗಿಸಲಾಗಿದೆ?

ಆ) ಸರ್ಕಾರ ಬೆಲೆ ನಿಗದಿಪಡಿಸುವಲ್ಲಿ ಸರ್ಕಾರದ ವಿಳಂಬ ನೀತಿಯಿಂದಾಗಿ ರೈತರಿಗೆ ದೊರಕಬೇಕಾದ ಸಬ್ಸಿಡಿ ದೊರಕದೆ ರೈತರಿಗೆ ಅನ್ಯಾಯವಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ? (ಕಳೆದ 5 ವರ್ಷಗಳಲ್ಲಿ ವಿವಿಧ ರಸಗೊಬ್ಬರಗಳ ಬೆಲೆಗಳ ವಿವರ ನೀಡುವುದು)